# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1344

ಸದಸ್ಯರ ಹೆಸರು : ಶ್ರೀ ಭೋಜೇಗೌಡ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 22.08.2025

ಉತ್ತರಿಸುವ ಸಚಿವರು : ಕೃಷಿ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕೃಷಿ ವಲಯದ ಬಲವರ್ಧನೆಗಾಗಿ ಹಾಗೂ ಬಹು ಸಂಖ್ಯೆಯಲ್ಲಿರುವ ರೈತರುಗಳ ನೆರವಿಗಾಗಿ ಸರ್ಕಾರ ಅನುಷ್ಠಾನಗೊಳಿಸುತ್ತಿರುವ ವಿವಿಧ ಪ್ರೋತ್ಸಾಹಕ ಯೋಜನೆಗಳಾವುವು; ಕಳೆದ 3 ವರ್ಷದಿಂದ ಈವರೆಗೂ ಚಿಕ್ಕಮಗಳೂರು ಜಿಲ್ಲೆಗೆ ಯಾವ ಯಾವ ಯೋಜನೆಯಡಿಯಲ್ಲಿ ರೈತರಿಗೆ ಸಹಾಯಧನ ಪ್ರೋತ್ಸಾಹ ಯೋಜನೆಯನ್ನು ನೀಡಲಾಗಿದೆ; (ತಾಲ್ಲೂಕುವಾರು ಫಲಾನುಭವಿವಾರು ಸಂಪೂರ್ಣವಾದ ಮಾಹಿತಿ ನೀಡುವುದು) | ರಾಜ್ಯದಲ್ಲಿ ಕೃಷಿ ವಲಯದ ಬಲವರ್ಧನೆಗಾಗಿ ಕೃಷಿ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ಈ ಕೆಳಕಂಡಂತಿವೆ.<br>1. ಬೀಜಗಳ ಪೂರೈಕೆ<br>2. ಸಸ್ಯ ಸಂರಕ್ಷಣೆ<br>3. ಕೃಷಿ ಯಾಂತ್ರೀಕರಣ<br>4. ಕೃಷಿ ಸಂಸ್ಕರಣೆ<br>5. ಹೈಟೆಕ್ ಹಾರ್ವೆಸ್ಟರ್ ಹಬ್<br>6. ಸೂಕ್ಷ್ಮ ನೀರಾವರಿ ಯೋಜನೆ<br>7. ರೈತ ಸಿರಿ<br>8. ದೇಸಿ ತಳಿಗಳ ಸಂರಕ್ಷಣೆ ಮತ್ತು ಉತ್ತೇಜನ ಕಾರ್ಯಕ್ರಮ<br>9. ಸಾವಯವ ಇಂಗಾಲ ಅಭಿಯಾನ<br>10. ಹೊಸ ಬೆಳೆ ವಿಮಾ ಯೋಜನೆ<br>11. ಬೆಳೆ ಸಮೀಕ್ಷೆ<br>12. ಮುಖ್ಯಮಂತ್ರಿಗಳ ರೈತ ವಿದ್ಯಾನಿಧಿ<br>13. ಕೃಷಿ ಪ್ರಶಸ್ತಿ ಮತ್ತು ಕೃಷಿ ಪಂಡಿತ ಪ್ರಶಸ್ತಿ<br>14. ತರಬೇತಿ ಕಾರ್ಯಕ್ರಮಗಳು<br>15. ಕೃಷಿ ಭಾಗ್ಯ<br>16. ರಾಷ್ಟ್ರೀಯ ಆಹಾರ ಭದ್ರತೆ ಮತ್ತು ಪೌಷ್ಠಿಕ ಅಭಿಯಾನ<br>17. ರಾಷ್ಟ್ರೀಯ ನೈಸರ್ಗಿಕ ಕೃಷಿ ಅಭಿಯಾನ<br>18. ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ-ಎಣ್ಣೆಕಾಳು<br>19. PM-RKVY-ಬೆಳೆ ವೈವಿಧ್ಯೀಕರಣ ಯೋಜನೆ<br>20. ಪ್ರಧಾನ ಮಂತ್ರಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಸಮಗ್ರ ಕೃಷಿ ಪದ್ಧತಿಯ ವಿಸ್ತರಣೆ ಹಾಗೂ ಜನಪ್ರಿಯಗೊಳಿಸುವ ಕಾರ್ಯಕ್ರಮ<br>21. ಕರ್ನಾಟಕ ರೈತ ಸಮೃದ್ಧಿ ಯೋಜನೆ<br>22. NFSNM – ಬೀಜ ಘಟಕಗಳು<br>23. ಕೃಷಿ ವಿಸ್ತರಣೆ (ATMA)<br>24. ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ |
| ಆ. | ಆಧುನಿಕ ಮತ್ತು ಸುಲಭವಾದ ಕೃಷಿ ವ್ಯವಸಾಯಕ್ಕಾಗಿ ಪ್ರೋತ್ಸಾಹ ನೀಡುವಲ್ಲಿ ಪರಿಣಾಮಕಾರಿ ಮಾರ್ಗದರ್ಶಗಳು ಹಾಗೂ ರಾಜ್ಯ ಕೇಂದ್ರ ಸರ್ಕಾರಗಳ ನೆರವಿನ ಯೋಜನೆಗಳ ನೀಡಿಕೆ ಮುಂತಾದ ರೈತ ಸಹಾಯಕ ಕಾರ್ಯಕ್ರಮಗಳು ಯಾವುವು; | |

| | | |
|---|---|---|
| | | 25. PM-RKVY- ಮಣ್ಣು ಆರೋಗ್ಯ ಮತ್ತು ಫಲವತ್ತತೆ ಯೋಜನೆ<br>26. ಕೃಷಿ ಗುಣ ಮಟ್ಟ ನಿಯಂತ್ರಣ ಬಂಡವಾಳ ವೆಚ್ಚಗಳು<br>27. ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವ ಯೋಜನೆ<br>ಕಳೆದ 3 ವರ್ಷದಿಂದ ಇಲ್ಲಿಯವರೆಗೆ ಚಿಕ್ಕಮಗಳೂರು ಜಿಲ್ಲೆಯ ರೈತರಿಗೆ ನೀಡಿರುವ ವಿವಿಧ ಸಹಾಯಧನ ಪ್ರೋತ್ಸಾಹ ಯೋಜನೆಗಳು ಮತ್ತು ಫಲಾನುಭವಿಗಳ ತಾಲ್ಲೂಕುವಾರು ಸಂಪೂರ್ಣ ವಿವರಗಳನ್ನು (ಸಿ ಡಿ) ಒದಗಿಸಲಾಗಿದೆ.<br>ಜಲಾನಯನ ಅಭಿವೃದ್ಧಿ ಇಲಾಖೆ ವತಿಯಿಂದ ರಾಜ್ಯದಲ್ಲಿ ಕೃಷಿ ವಲಯದ ಬಲವರ್ಧನೆಗಾಗಿ ಅನುಷ್ಠಾನ ಗೊಳಿಸುತ್ತಿರುವ ಯೋಜನೆಗಳು ಈ ಕೆಳಕಂಡಂತಿವೆ<br>1. ಜಲಾನಯನ ಅಭಿವೃದ್ಧಿ ಘಟಕ-ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ 2.0 (WDC-PMKSY 2.0)<br>2. ಮಳೆ ಆಧಾರಿತ ಪ್ರದೇಶದ ಅಭಿವೃದ್ಧಿ (RAD-RKVY)<br>3. ವಿಶ್ವ ಬ್ಯಾಂಕ್ ನೆರವಿನ ರಿವಾರ್ಡ್ ಯೋಜನೆ<br>4. ರೈತ ಉತ್ಪಾದಕರ ಸಂಸ್ಥೆಗಳ ಉತ್ತೇಜನ:<br>ಅ) ಅಮೃತ ರೈತ ಉತ್ಪಾದಕ ಸಂಸ್ಥೆಗಳ ಸ್ಥಾಪನೆ ಮತ್ತು ಪ್ರೋತ್ಸಾಹ<br>ಆ) ರೈತ ಉತ್ಪನ್ನಗಳಿಗೆ ಏಕೀಕೃತ ಬ್ರ್ಯಾಂಡಿಂಗ್<br>5. 10,000 ರೈತ ಉತ್ಪಾದಕರ ಸಂಸ್ಥೆಗಳ ರಚನೆ ಮತ್ತು ಉತ್ತೇಜನ (ಕೇಂದ್ರ ವಲಯ)<br>**ಇತರೆ ಇಲಾಖೆಯ ಅನುದಾನದಿಂದ ಅನುಷ್ಠಾನಗೊಳಿಸಲಾಗುತ್ತಿರುವ ಕಾರ್ಯಕ್ರಮಗಳು :**<br>6. ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ - ಇತರೆ ಉಪಚಾರಗಳು (PMKSY - OI)<br>7. ಅಟಲ್ ಭೂಜಲ್ ಯೋಜನೆ<br>8. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ- ಸಮಸ್ಯಾತ್ಮಕ ಮಣ್ಣುಗಳ ಸುಧಾರಣೆ (RKVY-RPS)<br>ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಚಿಕ್ಕಮಗಳೂರು ಜಿಲ್ಲೆಯಲ್ಲಿ ರೈತರಿಗೆ ಕೆಳಕಂಡ ಸಹಾಯಧನ ಪ್ರೋತ್ಸಾಹ ಯೋಜನೆ ಅನುಷ್ಠಾನದಲ್ಲಿರುತ್ತದೆ:<br>1. ಮಳೆ ಆಧಾರಿತ ಪ್ರದೇಶದ ಅಭಿವೃದ್ಧಿ (RAD-RKVY RAFTAAR)<br>2. ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ - ಇತರೆ ಉಪಚಾರಗಳು (PMKSY - OI)(PDMC)<br>ಮೇಲ್ಕಂಡ ಸಹಾಯಧನ ಪ್ರೋತ್ಸಾಹ ಯೋಜನೆಗಳಡಿ |

| | | |
|---|---|---|
| | | ಕಳೆದ 3 ವರ್ಷಗಳಿಂದ ಈವರೆಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಸೌಲಭ್ಯ ಪಡೆದ ತಾಲ್ಲೂಕುವಾರು ಫಲಾನುಭವಿ ವಿವರವನ್ನು (ಸಿ ಡಿ) ಒದಗಿಸಲಾಗಿದೆ. |
| ಇ) | ಕೃಷಿ ಇಲಾಖೆ ಸಿಬ್ಬಂದಿ ವರ್ಗದ ಕೊರತೆ ಹಾಗೂ ಇಲಾಖೆ ಕಾರ್ಯಾಚರಣೆಗೆ ಬೇಕಾಗಿರುವ ಮೂಲಸೌಲಭ್ಯ/ಸೌಕರ್ಯಗಳನ್ನು ಸುವ್ಯವಸ್ಥಿತವಾಗಿ ಒದಗಿಸಿಲ್ಲದ ಕಾರಣ ಯೋಜನಾನುಷ್ಠಾನದಲ್ಲಿ ಎದುರಿಸುತ್ತಿರುವ ಅನಾನುಕೂಲಗಳನ್ನು ಪರಿಹರಿಸುವಲ್ಲಿ ಸರ್ಕಾರದ ಕ್ರಮಗಳು ಯಾವುವು (ಸಂಪೂರ್ಣವಾದ ಮಾಹಿತಿ ನೀಡುವುದು | ಕೃಷಿ ಇಲಾಖೆಯಲ್ಲಿ 8932 ಹುದ್ದೆಗಳು ಮಂಜೂರಾಗಿದ್ದು, 3302 ಹುದ್ದೆಗಳು ಭರ್ತಿಯಾಗಿದೆ. 5630 ಹುದ್ದೆಗಳು ಖಾಲಿ ಇರುತ್ತವೆ.<br>ಹೊರಗುತ್ತಿಗೆ/ಗುತ್ತಿಗೆ ಆಧಾರದ ಮೇಲೆ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿಯಲ್ಲಿ ಸಹಾಯಕ ತಾಂತ್ರಿಕರ ಸೇವೆಯನ್ನು ಹಾಗೂ ಆತ್ಮ ಯೋಜನೆಯಡಿಯಲ್ಲಿ ಉಪ ಯೋಜನಾ ನಿರ್ದೇಶಕರು, ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕರು ಮತ್ತು ಸಹಾಯಕ ತಾಂತ್ರಿಕ ವ್ಯವಸ್ಥಾಪಕರ ಸೇವೆಯನ್ನು ಪಡೆಯಲಾಗಿರುತ್ತದೆ. ಪ್ರತಿ ರೈತ ಸಂಪರ್ಕ ಕೇಂದ್ರಕ್ಕೆ ಒಬ್ಬರಂತೆ ದಾಸ್ತಾನು ನಿರ್ವಹಣಾ ಸಿಬ್ಬಂದಿಗಳ ಸೇವೆಯನ್ನು ಸಹ ಬಳಸಿಕೊಂಡು ಇಲಾಖಾ ಯೋಜನೆಗಳನ್ನು ಸಕಾಲದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.<br>ಕೃಷಿ ಇಲಾಖೆಗೆ ಬೇಕಾಗಿರುವ ಮೂಲಸೌಲಭ್ಯ/ಸೌಕರ್ಯಗಳನ್ನು ಲಭ್ಯವಿರುವ ಅನುದಾನದಲ್ಲಿ ವ್ಯವಸ್ಥಿತವಾಗಿ ಒದಗಿಸಲಾಗುತ್ತಿದ್ದು, ಇಲಾಖೆಯ ಯೋಜನೆಗಳನ್ನು ನಿಗದಿತ ಸಮಯದಲ್ಲಿ ಅನುಷ್ಠಾನಗೊಳಿಸಲು ಯಾವುದೇ ತೊಂದರೆಗಳು ಉಂಟಾಗದಂತೆ ಕ್ರಮ ವಹಿಸಲಾಗುತ್ತಿದೆ.<br>ಜಲಾನಯನ ಅಭಿವೃದ್ಧಿ ಇಲಾಖೆಗೆ ಪ್ರತ್ಯೇಕ ವೃಂದ ಮತ್ತು ನೇಮಕಾತಿ ನಿಯಮ ಇರುವುದಿಲ್ಲ. ಕೃಷಿ ಅರಣ್ಯ ತೋಟಗಾರಿಕೆ ಹಾಗೂ ಇತರೆ ಇಲಾಖೆಗಳ ಅಧಿಕಾರಿ/ನೌಕರರು ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ.<br>ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಒಟ್ಟು 339 ಹುದ್ದೆಗಳು ಮಂಜೂರಾಗಿದ್ದು, 178 ಹುದ್ದೆಗಳು ಭರ್ತಿಯಾಗಿರುತ್ತವೆ. 161 ಹುದ್ದೆಗಳು ಖಾಲಿ ಇರುತ್ತವೆ.<br>ಸಿಬ್ಬಂದಿ ಕೊರತೆಯನ್ನು ಹೊರಗುತ್ತಿಗೆ ಮೂಲಕ (ನಿಯಮಾನುಸಾರ ಹೊರಗುತ್ತಿಗೆ ಸಂಸ್ಥೆಯ ಮೂಲಕ) ಪಡೆದು ಸರಿದೂಗಿಸಿಕೊಳ್ಳಲಾಗುತ್ತಿದೆ. |
| ಈ) | ಕೃಷಿಗಾರಿಕೆ ಲಾಭದಾಯಕವಾಗಿ ಮಾಡುವಲ್ಲಿ ಹಾಗೂ ಹೆಚ್ಚಿನ ಪ್ರಮಾಣದಲ್ಲಿ ಕೃಷಿ ಕ್ಷೇತ್ರದಲ್ಲಿ ಜನರು ತೊಡಗಿಸಿಕೊಳ್ಳುವಂತಹ ಪರಿಸ್ಥಿತಿಯ ನಿರ್ಮಾಣ ಉಂಟುಮಾಡುವಲ್ಲಿ ಸರ್ಕಾರದ ಕಾರ್ಯಕ್ರಮಗಳು | ಕೃಷಿಯನ್ನು ಲಾಭದಾಯಕವನ್ನಾಗಿಸುವ ನಿಟ್ಟಿನಲ್ಲಿ ಕೃಷಿ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧ 2ರಲ್ಲಿ ನೀಡಲಾಗಿದೆ.<br>ಕೃಷಿಗಾರಿಕೆ ಲಾಭದಾಯಕವನ್ನಾಗಿ ಮಾಡುವಲ್ಲಿ ಹಾಗೂ |

| | | |
|---|---|---|
| | ಯಾವುವು? (ವಿಸ್ತೃತವಾದ ಮಾಹಿತಿ ನೀಡುವುದು) | ಹೆಚ್ಚಿನ ಪ್ರಮಾಣದಲ್ಲಿ ಕೃಷಿ ಕ್ಷೇತ್ರದಲ್ಲಿ ಜನರು ತೊಡಗಿಸಿಕೊಳ್ಳುವಂತಹ ಪರಿಸ್ಥಿತಿಯ ನಿರ್ಮಾಣ ಉಂಟು ಮಾಡುವಲ್ಲಿ ಜಲಾನಯನ ಅಭಿವೃದ್ಧಿ ಯೋಜನೆ/ ಕಾರ್ಯಕ್ರಮಗಳು ಈ ಕೆಳಕಂಡಂತಿವೆ:<br>1. **ಜಲಾನಯನ ಅಭಿವೃದ್ಧಿ ಘಟಕ-ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ 2.0 (WDC-PMKSY 2.0);**<br>ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಈ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮವಾಗಿ ಶೇಕಡ 60:40 ಅನುಪಾತದಲ್ಲಿ ಅನುದಾನವನ್ನು ಭರಿಸುತ್ತವೆ. ಈ ಯೋಜನೆಯು ಪ್ರಸ್ತುತ ರಾಜ್ಯದ 30 ಜಿಲ್ಲೆಗಳ ಆಯ್ದ 63 ತಾಲ್ಲೂಕುಗಳಲ್ಲಿ ಒಟ್ಟು 2.90 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅನುಷ್ಠಾನ ಮಾಡಲಾಗುತ್ತಿದೆ. ಯೋಜನೆ ಅನುಷ್ಠಾನವು 2021-22 ರಿಂದ ಪ್ರಾರಂಭವಾಗಿದ್ದು, ಈ ಯೋಜನೆಯಡಿ ಸಮತಟ್ಟಾದ ಪ್ರದೇಶದ ಜಲಾನಯನ ಚಟುವಟಿಕೆಗಳ ಅನುಷ್ಠಾನಕ್ಕೆ ರೂ. 22,000 ಪ್ರತಿ ಹೆಕ್ಟೇರ್ ಗೆ, ಮರುಭೂಮಿ ಮತ್ತು ಗುಡ್ಡ ಗಾಡು ಪ್ರದೇಶದಲ್ಲಿ ಜಲಾನಯನ ಚಟುವಟಿಕೆಗಳ ಅನುಷ್ಠಾನಕ್ಕೆ ರೂ. 28,000 ಪ್ರತಿ ಹೆಕ್ಟೇರ್ ಗೆ ಅನುದಾನವನ್ನು ಒದಗಿಸಲಾಗುತ್ತದೆ. ಈ ಯೋಜನೆಯಡಿ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತದೆ.<br>• ಜಲಾನಯನ ಮೇಲ್ ಸ್ತರಗಳಲ್ಲಿ ಮಣ್ಣು ಸಂರಕ್ಷಣೆ ಮಾಡಲು ರಬಲ್ ತಡೆ, ಬೌಲ್ಡರ್ ತಡೆ, ಸಸ್ಯ ತಡೆಗಳ ಅನುಷ್ಠಾನ ಸಮುದಾಯ, ನಾಲಾ ಪ್ರದೇಶಗಳಲ್ಲಿ ತಡೆಅಣೆ, ಕಿಂಡಿ ಅಣೆ, ನಾಲಾ ಬದು, ಜಿನುಗುಕೆರೆ, ಗೋಕಟ್ಟೆ ಮತ್ತು ಇತರೆ ನೀರು ಸಂಗ್ರಹಣಾ ವಿನ್ಯಾಸಗಳನ್ನು ಜಲಾನಯನ ಸಮಿತಿಗಳ ಮೂಲಕ/ಯೋಜನಾ ಅನುಷ್ಠಾನ ಸಂಸ್ಥೆಗಳ ಮೂಲಕ ಅನುಷ್ಠಾನ ಮಾಡಲಾಗುವುದು.<br>• ರೈತರ ಜಮೀನುಗಳಲ್ಲಿ ಬದುಗಳು, ಕೃಷಿಹೊಂಡ, ಅಲ್ಪ ಆಳದ ಬಾವಿ, ಕೃಷಿ ಅರಣ್ಯೀಕರಣ, ಖುಷ್ಕಿ ತೋಟಗಾರಿಕೆ, ಮೇವು ಅಭಿವೃದ್ಧಿ ಸೇರಿದಂತೆ ಇತರ ಜಲಾನಯನ ಚಟುವಟಿಕೆಗಳನ್ನು ಅನುಷ್ಠಾನ ಮಾಡಲಾಗುವುದು,<br>• ಆಸ್ತಿ ರಹಿತ ಕೂಲಿ ಕಾರ್ಮಿಕರು ಮತ್ತು ರೈತರುಗಳನ್ನು ಸ್ವಸಹಾಯ ಗುಂಪುಗಳನ್ನು ರಚಿಸುವ ಮೂಲಕ ಸಂಘಟಿಸಿ ವಿವಿಧ ಜೀವನೋಪಾಯ ಚಟುವಟಿಕೆಗಳನ್ನು ಕೈಗೊಳ್ಳಲು ನೆರವು ಒದಗಿಸಲಾಗುವುದು. ಇದರ ಜೊತೆಗೆ ವಿಶೇಷ ತರಬೇತಿಗಳನ್ನು ಉಚಿತವಾಗಿ ನೀಡಲಾಗುವುದು. ಸ್ವಸಹಾಯ ಗುಂಪುಗಳನ್ನು ಬ್ಯಾಂಕ್‌ಗಳ ಜೊತೆ ಲಿಂಕ್ ಮಾಡಲು ಸಹ ಇಲಾಖೆಯು ನೆರವು ನೀಡುತ್ತಿದೆ.<br>• ರೈತ ಉತ್ಪಾದಕ ಸಂಸ್ಥೆಗಳನ್ನು ಉತ್ತೇಜಿಸುವುದು.<br>2. **ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ-ಇತರೆ ಉಪಚಾರಗಳು (PMKSY-OI):** |

| | | |
|---|---|---|
| | | ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಈ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮವಾಗಿ ಶೇಕಡ 60:40 ಅನುಪಾತದಲ್ಲಿ ಅನುದಾನವನ್ನು ಭರಿಸುತ್ತವೆ. ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ - ಇತರೆ ಉಪಚಾರಗಳು (PMKSY-OI) ಯೋಜನೆಯಡಿ ಸೂಕ್ಷ್ಮ ನೀರಾವರಿ ಘಟಕಗಳನ್ನು ಅಳವಡಿಸಿಕೊಂಡಿರುವ ಮತ್ತು ಅಳವಡಿಸಿಕೊಳ್ಳಲು ಮುಂದೆ ಬರುವ ರೈತರಿಗೆ ವೈಯಕ್ತಿಕ ನೀರು ಸಂಗ್ರಹಣಾ ವಿನ್ಯಾಸಗಳ ರಚನೆ, ಅಂತರ್ಜಲ ಸುರಕ್ಷಿತ ತಾಲ್ಲೂಕುಗಳಲ್ಲಿ ಕೊಳವೆ ಬಾವಿಗಳ ರಚನೆ, ವೈಯಕ್ತಿಕ ಸಣ್ಣ ಕೆರೆಗಳ ಪುನರುಜ್ಜೀವನ, ನಿಷ್ಕ್ರಿಯ ಕೊಳವೆ ಬಾವಿಗಳ ಪುನರುಜ್ಜೀವನ, ಪೈಪುಗಳ ವಿತರಣೆ ಮತ್ತು ವಿದ್ಯುತ್/ಡೀಸೆಲ್/ಪೆಟ್ರೋಲ್/ಪವನ/ಸೋಲಾರ್ ಚಾಲಿತ ನೀರೆತ್ತುವ ಸಾಧನಗಳನ್ನು ಅಳವಡಿಸಿಕೊಳ್ಳಲು ಶೇ. 50 ರಷ್ಟು ಸಹಾಯಧನ ಅಥವಾ ಆಯಾ ಘಟಕಗಳಿಗೆ ನಿಗದಿಪಡಿಸಿದ ಗರಿಷ್ಠ ಮೊತ್ತ ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಮೊತ್ತವನ್ನು ಒದಗಿಸಲು ಅವಕಾಶವಿರುತ್ತದೆ. ಒಬ್ಬ ವೈಯಕ್ತಿಕ ಫಲಾನುಭವಿಗಳಿಗೆ ಗರಿಷ್ಠ ರೂ.75,000 ದವರೆಗೆ ಸಹಾಯಧನ ನೀಡಬಹುದಾಗಿದೆ.<br>2. **"ಮಳೆ ಆಧಾರಿತ ಪ್ರದೇಶ ಅಭಿವೃದ್ಧಿ (RAD)" - RKVY-RAFTAAR**<br>ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ವಿಶೇಷವಾಗಿ ರಾಜ್ಯದ ಎಲ್ಲಾ ಮಳೆಯಾಶ್ರಿತ ಪ್ರದೇಶದಲ್ಲಿ ಅನುಷ್ಠಾನ ಮಾಡಲಾಗುತ್ತಿದೆ. ಈ ಯೋಜನೆಯ ಮುಖ್ಯ ಉದ್ದೇಶವು ರೈತರ ಜಮೀನಿನಲ್ಲಿ ವಿವಿಧ ಮಾದರಿಯ ಸಮಗ್ರ ಕೃಷಿ ಪದ್ಧತಿಗಳನ್ನು ಹಾಗೂ ಮೌಲ್ಯವರ್ಧಿತ ಚಟುವಟಿಕೆಗಳನ್ನು ಅಳವಡಿಸಿಕೊಳ್ಳುವಂತೆ ಉತ್ತೇಜಿಸುವುದು; ರೈತರಿಗೆ ಸಮಗ್ರ ಕೃಷಿ ಪದ್ಧತಿಗಳಾದ ಸಮಗ್ರ ಕೃಷಿ ಪದ್ಧತಿಯಡಿ ಬೆಳೆಗಳು (ರಾಗಿ ಬೆಳೆಗಳು / ಎಣ್ಣೆಬೀಜಗಳು/ ದ್ವಿದಳ ಧಾನ್ಯಗಳು/ ತರಕಾರಿಗಳು/ಮೇವು) + ಮರಗಳು (ತೋಟಗಾರಿಕೆ/ ಕೃಷಿ ಅರಣ್ಯ)+ ಜಾನುವಾರುಗಳು ಹಾಲು ಹಸುಗಳು / ಎಮ್ಮೆಗಳು / ಸಣ್ಣ ಮೆಲುಕು ಹಾಕುವ ಪ್ರಾಣಿಗಳು (10 ಪ್ರಾಣಿಗಳು (ಕುರಿ ಅಥವಾ ಮೇಕೆ ಅಥವಾ ಹಂದಿಗಳು) / 50 ಪಕ್ಷಿಗಳು (ಬಾತುಕೋಳಿ) ಅಳವಡಿಸಲು ಉತ್ತೇಜಿಸುವುದು. ಮೌಲ್ಯವರ್ಧನೆ ಚಟುವಟಿಕೆಗಳಾದ ಮೀನುಗಾರಿಕೆ, ಜೇನುಕೃಷಿ, ಸೈಲೇಜ್ ತಯಾರಿಕ ಘಟಕ ಮತ್ತು ಎರೆಹುಳುಗೊಬ್ಬರ ಘಟಕಗಳನ್ನು ಇತರೆ ಯೋಜನೆಗಳೊಂದಿಗೆ ಒಗ್ಗೂಡಿಸುವುದು. ಸದರಿ ಯೋಜನೆಯಡಿ ಪ್ರತಿ ಕೃಷಿ ಕುಟುಂಬಕ್ಕೆ ರೂ. 30,000/- ಆರ್ಥಿಕ ಸಹಾಯವನ್ನು ನೀಡಲಾಗುವುದು. |

ಈ ಯೋಜನೆಯು ಸಮಗ್ರ ಕೃಷಿ ಪದ್ಧತಿಯನ್ನು ರೈತರ ಜಮೀನಿನಲ್ಲಿ ಅಳವಡಿಸಿಕೊಳ್ಳಲು ಪ್ರೋತ್ಸಾಹಿಸಲಾಗುತ್ತಿದ್ದು, ಸದರಿ ಯೋಜನೆಯ ಲಾಭದಾಯಕದ ಕುರಿತು ಗ್ರಾಮ ಸಭೆಗಳಲ್ಲಿ ಯೋಜನೆಯ ಸವಲತ್ತುಗಳ ಬಗ್ಗೆ ಮಾಹಿತಿಯನ್ನು ಹಾಗೂ ರೈತರಿಗೆ ತರಬೇತಿಗಳನ್ನು ಏರ್ಪಡಿಸಿ ಯೋಜನೆಯ ಸವಲತ್ತುಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಯೋಜನೆಗಳ ಬಗ್ಗೆ ರೈತ ಫಲಾನುಭವಿಗಳು ಸುಲಭಸಾಧ್ಯವಾಗಿ ಮಾಹಿತಿಯನ್ನು ತಲುಪಿಸುವಲ್ಲಿ ಕ್ರಮವಹಿಸಲಾಗಿದೆ.

**4. ವಿಶ್ವ ಬ್ಯಾಂಕ್ ನೆರವಿನ REWARD ಯೋಜನೆ (Rejuvenating Watersheds for Agriculture Resilience through Innovative Development);**

REWARD ಯೋಜನೆಯನ್ನು 2022-23ನೇ ಸಾಲಿನಿಂದ ರಾಜ್ಯದ 25 ಜಿಲ್ಲೆಗಳಲ್ಲಿ ರೂ.600 ಕೋಟಿ (ರಾಜ್ಯದ ಪಾಲು: ಶೇ.30 ಹಾಗೂ ವಿಶ್ವ ಬ್ಯಾಂಕ್ ನೆರವು: ಶೇ.70) ವೆಚ್ಚದಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದೆ. ಕರ್ನಾಟಕವು ಮಾರ್ಗದರ್ಶಕ (Light house) ರಾಜ್ಯವಾಗಿ ಗುರುತಿಸಲ್ಪಟ್ಟಿದ್ದು, ಇತರೆ ಸಹಭಾಗಿ ರಾಜ್ಯಗಳಿಗೆ ತಾಂತ್ರಿಕ ಸಹಯೋಗ ನೀಡುತ್ತಿದೆ.

**ಯೋಜನಾ ಉದ್ದೇಶ:** ಸಹಭಾಗಿ ರಾಜ್ಯಗಳ ಆಯ್ದ ಜಲಾನಯನಗಳಲ್ಲಿ ರೈತರ ಸುಸ್ಥಿರತೆಯನ್ನು ಹೆಚ್ಚಿಸಲು ಮತ್ತು ಮೌಲ್ಯ ಸರಪಳಿಗಳನ್ನು ಬೆಂಬಲಿಸಲು ಸುಧಾರಿತ ಜಲಾನಯನ ನಿರ್ವಹಣೆಯನ್ನು ಅಳವಡಿಸಿಕೊಳ್ಳುವುದಕ್ಕಾಗಿ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಸಂಸ್ಥೆಗಳ ಸಾಮರ್ಥ್ಯವನ್ನು ಬಲವರ್ಧನೆ ಮಾಡುವುದು.

**ಪ್ರಮುಖ ಕಾರ್ಯಚಟುವಟಿಕೆಗಳು:** 25 ಜಿಲ್ಲೆಗಳಲ್ಲಿ ಅಂದಾಜು 25.00 ಲಕ್ಷ ಹೆ. ಪ್ರದೇಶದಲ್ಲಿ ಭೂ ಸಂಪನ್ಮೂಲ ಸಮೀಕ್ಷೆ (Land Resource Inventory- LRI) ಕೈಗೊಳ್ಳುವುದು; ಬೆಳೆ ಸೂಕ್ತತೆ, ಪೋಷಕಾಂಶಗಳು & ಇನ್ನಿತರೆ ಮಾಹಿತಿಯುಳ್ಳ LRI ಕಾರ್ಡ್ ಗಳನ್ನು ರೈತರಿಗೆ ವಿತರಣೆ; 1.0 ಲಕ್ಷ ಹೆ. ಪ್ರದೇಶದಲ್ಲಿ (20 ಉಪಜಲಾನಯನಗಳು) ಭೂ-ಸಂಪನ್ಮೂಲ ಹಾಗೂ ಜಲವಿಜ್ಞಾನ ಶಿಫಾರಸ್ಸುಗಳ ಆಧಾರಿತ ಸಂಪೂರ್ಣ ಜಲಾನಯನ ಉಪಚಾರ; ರೈತ ಉತ್ಪಾದಕ ಸಂಸ್ಥೆಗಳ (FPOs) ಪ್ರವರ್ಧನೆ ಮತ್ತು ಮೌಲ್ಯ ಸರಪಳಿ ಅಭಿವೃದ್ಧಿ; ರೈತರಿಗೆ ಸುಧಾರಿತ ಕೃಷಿ-ಹವಾಮಾನ ಸಲಹಾ ಸೇವೆ ಒದಗಿಸುವುದು.

**ಸಂಖ್ಯೆ:** AGRI/227/AML/2025

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು